ಅ) ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಹಾಲಿ ಯಾನ ಪ್ರದೇಶಗಳಿಗೆ ವಿಮಾನ ಸೌಲಭ್ಯ ಕಲ್ಪಿಸಲಾಗಿದೆ

ಆ) ಇದನ್ನು ಹೆಚ್ಚಿಸುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ

ಇ) ಹುಬ್ಬಳ್ಳಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್ ಎಂ ರೇವಣ್ಣ (ರೇಷ್ಮೆ, ಜವಳಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನ ಯಾನ ಸಚಿವರು)

ಅ) ಪ್ರಸ್ತುತ ಬೆಂಗಳೂರು ಮತ್ತು ಹುಬ್ಬಳ್ಳಿ ನಡುವೆ ದಿನವು ವಿಮಾನ ಯಾನ ಸೇವೆಯು ಆಪರೇಟ್ ಆಗುತ್ತಿದೆ

ಆ) ಹುಬ್ಬಳ್ಳಿಯಿಂದ ವಿಮಾನ ಸೇವೆಯ ಏರಿಕೆಯು ಸಂಚಾರ ಸಾಮರ್ಥ್ಯವನ್ನು ಅವಲಂಬಿಸಿದೆ ಇಷ್ಟರೊಳಗೆ ಹುಬ್ಬಳ್ಳಿ ಮತ್ತು ಮುಂಬಯಿ ನಡುವೆ ಸಹ ವಿಮಾನ ಯಾನ ಸೇವೆಗಳನ್ನು ಆರಂಭಿಸುವ ಸಾಧ್ಯತೆಯಿದೆ ಸರ್ಕಾರದ ವತಿಯಿಂದ ಬೆಂಗಳೂರು ಮತ್ತು ಮಂಗಳೂರನ್ನು ಬಿಟ್ಟು ರಾಜ್ಯದಲ್ಲಿ ಹೊಸ ಸ್ಥಳಗಳಿಗೆ ಪ್ರಾದೇಶಿಕ ವಿಮಾನ ಯಾನ ಸೇವೆಯನ್ನು ಒದಗಿಸಿವುದನ್ನು ಉತ್ತೇಜಿಸಲು, ಎವಿಯೇಷನ್ ಟರ್ಬೈನ್ ಇಂಧನದ ಮೇಲಿನ ಮಾರಾಟ ತೆರಿಗೆಯನ್ನು ಶೇಕಡಾ 4ಕ್ಕೆ ಇಳಿಸಲಾಗಿದೆ

ಇ) ಹುಬ್ಬಳ್ಳಿ ವಿಮಾನ ನಿಲ್ದಾಣವು ಭಾರತೀಯ ವೈಮಾನಿಕ ಪ್ರಾಧಿಕಾರಕ್ಕೆ ಸೇರಿದೆ ಪ್ರಸ್ತುತ ಅಲ್ಲಿರುವ ಈಗಿನ ಸೌಲಭ್ಯಗಳು 50 ಆಸನ ಸಾಮರ್ಥ್ಯವುಳ್ಳ ಮಿತಿಯ ವಿಮಾನಗಳ ಹಾರಾಟಕ್ಕೆ ತಕ್ಕಷ್ಟಿದೆ

ಧಾರವಾಡದ ಕೆ ಎಂ ಎಫ್ ಸಂಸ್ಕರಣಾ ಘಟಕದ ಸಾಮರ್ಥ್ಯ

217 (576) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಧಾರವಾಡದಲ್ಲಿರುವ ಕೆ ಎಂ ಎಫ್ ನ ಸಂಸ್ಕರಣಾ ಘಟಕದ ಪೂರ್ಣ ಸಾಮರ್ಥ್ಯ ಎಷ್ಟು

ಆ) ಸಂಸ್ಕರಣಾ ಘಟಕದ ಪೂರ್ಣ ಪ್ರಮಾಣದ ಸಾಮರ್ಥ್ಯವನ್ನು ಬಳಸಿಕೊಳ್ಳಲಾಗುತ್ತಿದೆಯೇ ಇಲ್ಲದಿದ್ದಲ್ಲಿ ಕಾರಣಗಳೇನು

ಇ) 1993ರಿಂದ 2003ರವರೆಗೆ ಘಟಕದ ಸಂಸ್ಕರಣದ ವಿವಿರ ನೀಡುವುದು

ಈ) ಧಾರವಾಡ ನಗರಕ್ಕೆ ಯಾವ ಯಾವ ಜಿಲ್ಲೆಗಳಲ್ಲಿ ಹಾಲು ಬರುತ್ತಿದೆ (ಕಳೆದ ಮೂರು ವರ್ಷಗಳ ವಿವರವನ್ನು ಜಿಲ್ಲಾವಾರು ನೀಡುವುದು)

ಉ) ಧಾರವಾಡ ಕೆ ಎಂ ಎಫ್ ಸಂಸ್ಕರಣಾ ಘಟಕದ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು

ಊ) ಸಂಸ್ಕರಣಾ ಘಟಕ ಹಾನಿಯಾಗಲು ಕಾರಣವೇನು?

ಶ್ರೀ ಎಂ ಮಹಾದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ) ಧಾರವಾಡ ಸರ್ಕಾರಿ ಹಾಲು ಉತ್ಪಾದಕರ ಒಕ್ಕೂಟದಲ್ಲಿರುವ ಡೇರಿ ಸಂಸ್ಕರಣಾ ಘಟಕದ ಪೂರ್ಣ ಸಾಮರ್ಥ್ಯ ದಿನಕ್ಕೆ 2 ಲಕ್ಷ ಲೀಟರ್ ಆಗಿರುತ್ತದೆ (12 ಲಕ್ಷ ಲೀಟರ್ ಹಾಲಿನ ಮಡಿ ಪರಿವರ್ತನಾ ಸಾಮರ್ಥ್ಯ ಸೇರಿ)

ಆ) ಸಂಸ್ಕರಣಾ ಘಟಕದ ಪೂರ್ಣ ಪ್ರಮಾಣದ ಸಾಮರ್ಥ್ಯವನ್ನು ಸಾಮಾನ್ಯವಾಗಿ ಸಮೃದ್ಧಿ ಕಾಲದಲ್ಲಿ (ಅಕ್ಟೋಬರ್ ನಿಂದ ಜನವರಿ ವರೆಗೆ) ಪೂರ್ಣವಾಗಿ ಬಳಸಿಕೊಳ್ಳಲಾಗುತ್ತಿದೆ ಹಾಲು ಪರಿವರ್ತನಾ ಘಟಕಗಳು ಸಮೃದ್ಧಿ ಕಾಲದಲ್ಲಿ ಮಾರಾಟವಾಗದೆ ಉಳಿಯುವ ಹೆಚ್ಚುವರಿ ಹಾಲನ್ನು ಹಾಲಿನ ಪುಡಿ ಮತ್ತು ಇತರೆ ಹಾಲು ಉತ್ಪನ್ನಗಳನ್ನು ತಯಾರಿಸಲು ಬಳಸಿಕೊಳ್ಳಲಾಗುತ್ತದೆ ಈ ಘಟಕವನ್ನು ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸಮೃದ್ಧಿ ಕಾಲದಲ್ಲಿ ಮಾರಟವಾಗದೆ ಉಳಿಯುವ ಹೆಚ್ಚುವರಿ ಹಾಲನ್ನು ಸಂಸ್ಕರಿಸಿ ಉತ್ಪನ್ನಗಳನ್ನಾಗಿ ತಯಾರಿಸಲು ಸ್ಥಾಪಿಸಲಾಗಿದೆ

ಬರಗಾಲ ಮುಂತಾದ ಕಾರಣಗಳಿಂದಾಗಿ ನಿರೀಕ್ಷಿಸಿದ ಮಟ್ಟದಲ್ಲಿ ಹೆಚ್ಚುವರಿ ಹಾಲು ಉತ್ಪಾದನೆಯಾಗದೆ ಸಾಕಷ್ಟು ಹಾಲು ಈ ಘಟಕಕ್ಕೆ ಪರಿವರ್ತನೆಗಾಗಿ ಸರಬರಾಜು ಆಗಿರುವುದಿಲ್ಲ ಆದರೂ ಸಹ ಕೋಲಾರ ಹಾಸನ ತುಮಕೂರು ಶಿವಮೊಗ್ಗ ಮೈಸೂರು ಬೆಂಗಳೂರು ಮುಂತಾದ ಜಿಲ್ಲೆಗಳಲ್ಲಿ ಉತ್ಪಾದನೆಯಾಗುವ ಹೆಚ್ಚುವರಿ ಹಾಲನ್ನು ಸಮೃದ್ಧಿ ಕಾಲದಲ್ಲಿ ಪರಿವರ್ತಿಸಿ ಘಟಕದಲ್ಲಿರುವ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ

ಇ)1993 ರಿಂದ 2003 ರವರೆಗೆ ಸರಾಸರಿ ಪ್ರತಿನಿತ್ಯ ಘಟಕದಲ್ಲಿ ಸಂಸ್ಕರಿಸಿರುವ ಹಾಲಿನ ವಿವರಗಳು ಈ ಕೆಳಕಂಡಂತಿರುತ್ತದೆ

ವರ್ಷ	ಹಾಲು ಸಂಸ್ಕರಣ ಪ್ರಮಾಣ (ಕೆ.ಜೆ ಗಳಲ್ಲಿ)	ಶೇಕಡಾವಾರು ಬಳಕೆಯಾದ ಸಂಸ್ಕರಣಾ ಸಾಮರ್ಥ್ಯ
1993–94	114174	57 1
1994–95	73971	37 0
1995–96	70948	35 0
1996–97	85776	42 9
1997–98	89433	44 7
1998–99	92326	46 2
1999–00	132351	66 2
2000–01	104299	52 1
2001–02	114469	57 2
2002–03	120868	60 4

ಈ) ಕಳೆದ ಮೂರು ವರ್ಷಗಳಿಂದ ಜಿಲ್ಲಾವಾರು ಧಾರವಾಡ ಹಾಲು ಒಕ್ಕೂಟಕ್ಕೆ ಬಂದಿರುವ ಹಾಲಿನ ವಿವರ ಈ ಕೆಳಕಂಡಂತಿದೆ (ಪ್ರತಿ ದಿನ ಸರಾಸರಿ ಕೆ ಜಿ ಗಳಲ್ಲಿ)

ಸಮೃದಿಕಾಲದಲ್ಲಿ ಕೋಲಾರ ಹಾಸನ ತುಮಕೂರು ಶಿವಮೊಗ್ಗ ಮೈಸೂರು ಬೆಂಗಳೂರು ಹಾಲು ಒಕ್ಕೂಟಗಳಿಂದಲೂ ಸಹ ಪರಿವರ್ತನೆಗೆ ಹಾಲು ಸ್ವೀಕರಿಸಲಾಗಿದೆ

ಜಿಲ್ಲೆಗಳು	2001–02	2002–03	2003–04
ಧಾರವಾಡ	9587	10296	9631

ಗದಗ	13309	14392	12451
ಹಾವೇರಿ	28345	31292	32567
ಉತ್ತರ ಕನ್ನಡ	8207	7360	6638
ಇತರೆ ಹಾಲು ಒಕ್ಕೂಟ	55021	57528	49682
ಒಟ್ಟು	114469	120868	110969

ಊ) 1 ಪ್ರತಿ ತಿಂಗಳು ಕರ್ನಾಟಕ ಹಾಲು ಮಹಾಮಂಡಳಿಯ ಕಾರ್ಯನಿರೂಪಣಾ ಸಮಿತಿ ಸಭೆಯಲ್ಲಿ ಧಾರವಾಡ ಪರಿವರ್ತನಾ ಘಟಕಕ್ಕೆ ಇತರೆ ಹಾಲು ಒಕ್ಕೂಟಗಳ ಹೆಚ್ಚುವರಿ ಹಾಲನ್ನು ಪರಿವರ್ತನೆಗೆ ಕಳುಹಿಸಿಕೊಡಲು ಹಾಲು ಸಂಚಲನಾ ಯೋಜನೆ ರೂಪಿಸಿ ಅದರಂತೆ ಕ್ರಮ ಅನುಸರಿಸಲಾಗುತ್ತಿದೆ

2 ಕಳೆದ ಮೂರು ವರ್ಷಗಳಿಂದ ಬರಗಾಲದ ಛಾಯೆಯಲ್ಲಿ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಹಾಲು ಉತ್ಪಾದನೆ ಕುಂಠಿತವಾಗಿದ್ದು ಧಾರವಾಡ ಹಾಲು ಒಕ್ಕೂಟದ ಕಾರ್ಯ ವ್ಯಾಪ್ತಿಯಲ್ಲಿರುವ ಹಾಲು ಉತ್ಪಾದಕರ ಸಹಕಾರ ಸಂಘಗಳ ಮುಖಾಂತರ ಹೆಚ್ಚಿನ ಹಾಲು ಉತ್ಪದನೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಇನ್ನು ಮುಂದಿನ ದಿನಗಳಲ್ಲಿ ಹೆಚ್ಚಿನ ಹಾಲು ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ

3 ಒಕ್ಕೂಟದಲ್ಲಿರುವ ಪರಿವರ್ತನಾ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಹೊರ ರಾಜ್ಯಗಳ ಹಾಲನ್ನೂ ಪರಿವರ್ತಿಸಲು ಸಹ ಉಪಯೋಗಿಸಲಾಗುವುದು

ಊ) 1 ಉತ್ತರ ಕನಾಟಕದ ಇತರೆ ಒಕ್ಕೂಟಗಳಿಂದ ನಿರೀಕ್ಷಿಸಿದ ಮಟ್ಟದಲ್ಲಿ ಹೆಚ್ಚುವರಿ ಹಾಲು ಪರಿವರ್ತನೆಗೆ ಬಾರದೇ ಇರುವ ಕಾರಣ ವರ್ಷದಲ್ಲಿ ಹೆಚ್ಚಿನ ಅವಧಿಗೆ ಘಟಕದ ಪರಿವರ್ತನಾ ಸಾಮರ್ಥ್ಯವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ

2 ಒಕ್ಕೂಟದಲ್ಲಿ ಸಹ ನಿರೀಕ್ಷಿಸಿದ ಮಟ್ಟದಲ್ಲಿ ಹಾಲು ಉತ್ಪಾದನೆಯಾಗುತ್ತಿಲ್ಲ

3 ಒಕ್ಕೂಟದಲ್ಲಿ ಸಿಬ್ಬಂದಿ ಸಂಖ್ಯೆ ಅವಶ್ಯಕತೆಗಿಂತ ಹೆಚ್ಚಾಗಿ ಇರುವುದು

4 ಹೊರ ರಾಜ್ಯದ ಖಾಸಗಿ ಡೇರಿಗಳು ಹಾಲಿನ ಮಾರಾಟದಲ್ಲಿ ಅನೈತಿಕ ಪೈಪೋಟಿ ನಡೆಸುತ್ತಿದ್ದು ಒಕ್ಕೂಟದ ಹಾಲು ಮತ್ತು ಹಾಲು ಉತ್ಪನ್ನಗಳ ಮಾರುಕಟ್ಟೆಗೆ ಧಕ್ಕೆ ಉಂಟಾಗಿರುವುದು

5 ಕಳೆದ 3–4 ವರ್ಷಗಳಲ್ಲಿ ಒಕ್ಕೂಟದ ಕಾರ್ಯವ್ಯಾಪ್ತಿಯಲ್ಲಿ ಬರಗಾಲ ಪರಿಸ್ಥಿತಿಯಿಂದ ನಿರೀಕ್ಷಿಸಿದ ಮಟ್ಟದಲ್ಲಿ ಹಾಲು ಶೇಖರಣೆ ಆಗದೇ ಇರುವುದು

ರಾಜ್ಯದಲ್ಲಿ ಅಂತರ್ಜಲ ಪ್ರಮಾಣ ಹೆಚ್ಚಳ

218 (577) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಾಲಿ ಪ್ರತಿ ಜಿಲ್ಲೆಯ ಅಂತರ್ಜಲದ ವಿವರಗಳನ್ನು ನೀಡುವುದು,